## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಮೈ.380/2017

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:1.3.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ:- ಶ್ರೀ ಎಂ.ಬಿ.ಗುರುಪ್ರಸಾದ್,ಮಳವಳ್ಳಿ ತಾಲ್ಲೂಕಿನ ನಿವಾಸಿ, ಇವರ ದೂರಿನ ಮೇಲೆ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ ಎಂ.ಬಿ.ಗುರುಪ್ರಸಾದ್, ಶೆಟ್ಟಿಹಳ್ಳಿ ನಿವಾಸಿ, ಮಳವಳ್ಳಿ ತಾಲ್ಲೂಕು, ಮಂಡ್ಯ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಮಹೇಶ್ ಬಾಬು ಎಂ.ಪಿ. ಪಿಡಿಒ, ಮತ್ತು (2) ಶ್ರೀ ಮಹದೇವು.ಎಂ. ಕಾರ್ಯದರ್ಶಿ, ಶೆಟ್ಟಿಹಳ್ಳಿ ಗ್ರಾಮ ಪಂಚಾಯತಿ, ಮಳವಳ್ಳಿ ತಾಲ್ಲೂಕು, (ಇನ್ನು ಮುಂದೆ ಕ್ರಮವಾಗಿ 1 ಮತ್ತು 2ನೇ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. ದೂರಿನ ಸಂಕ್ಷಿಪ್ತ ವಿವರಣೆ:-

ದೂರುದಾರರ ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಮಾಗನೂರು ಗ್ರಾಮದ ಸರ್ವೆ ನಂ.198 /2 ವಿಸ್ತೀರ್ಣ 2 ಎಕರೆ 3 ಗುಂಟೆ ಸ್ವತ್ತು ತನ್ನ ಅಣ್ಣ ಎಂ.ಬಿ. ಜಗದೀಶ ಬಿನ್ ಲೇಟ್ ಎಂ.ಬಿ.ಬಸವರಾಜಪ್ಪರವರು ದಿ:15.05.1993ರಂದು ಸದರಿ ಗ್ರಾಮದ ಎಂ.ಬಿ.ಮದೇವಪ್ಪ ಬಿನ್ ಲೇಟ್ ಎಂ.ಸಿ.ಬಸವಪ್ಪನವರಿಂದ ಕ್ರಯಕ್ಕೆ ಪಡೆದಿದ್ದು, ತನ್ನ ಅಣ್ಣ ಸದರಿ ಜಮೀನನ್ನು ಅನ್ಯಕ್ರಾಂತ್ಯ ಮಾಡಿಸಿರುತ್ತಾರೆ. ತನ್ನ ಅಣ್ಣ ಮೃತ ಪಟ್ಟ ನಂತರ ಮರಣಶಾಸನ ಬರೆದು ದಿ:29.03.2014ರಂದು ಮೃತ ಪಟ್ಟಿರುತ್ತಾರೆ. ಅದರಂತೆ ಸದರಿ ಸ್ವತ್ತು ತನ್ನ ಹೆಸರಿಗೆ ಖಾತೆಯಾಗಿ ಪಹಣಿ ಪತ್ರಿಕೆಯು ಸಹ ಬಂದಿರುತ್ತದೆ. ದಿನಾಂಕ 12.05.2015ರಂದು ಎದುರುದಾರರ ಕಚೇರಿಗೆ ಪೂರಕ ದಾಖಲೆಗಳನ್ನು ಸಲ್ಲಿಸಿ ಗಣಕೀಕೃತ ಖಾತೆಗೆ (ಇ ಖಾತೆಗೆ) ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದು ಆದರೆ ಎದುರುದಾರರು ಅರ್ಜಿ

ಸಲ್ಲಿಸಿ ಒಂದು ವರ್ಷ 9 ತಿಂಗಳು ಕಳೆದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಈ ಬಗ್ಗೆ ಎದುರುದಾರರನ್ನು ಕೇಳಲಾಗಿ ಯಾವುದೇ ಸರಿಯಾದ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

ದೂರಿನ ಜೊತೆ ಕ್ರಮ ಪತ್ರದ ಜೆರಾಕ್ಸ್ ಪ್ರತಿ, ಮರಣಶಾಸನ ಪತ್ರ, ಪಹಣಿ ಪತ್ರಿಕೆ, ಅರ್ಜಿಯ ಪ್ರತಿ, ಮ್ಯೂಟೇಷನ್ ಪ್ರತಿ ಹಾಗೂ ಇತರೆ ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

3. ಸದರಿ ದೂರಿಗೆ ಸಂಬಂಧಪಟ್ಟಂತೆ ಎದುರುದಾರರಿಂದ ಆಕ್ಷೇಪಣೆ ಕೋರಲಾಗಿ 1 ಮತ್ತು 2 ನೇ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ನೀಡಲಾದ ಅರ್ಜಿಗೆ ಸಂಬಂಧಪಟ್ಟಂತೆ ದಿಃ17.03.2016ಂದು ಸದರಿ ಸ್ವತ್ತನ್ನು ಅಳತೆ ಮಾಡಲು ಸಭೆಯ ನಿರ್ಣಯದಂತೆ ಹಣ ಪಾವತಿಸಲು ಕಚೇರಿಗೆ ಕಳುಹಿಸಿಕೊಟ್ಟಿದ್ದು, ಈ ಬಗ್ಗೆ ಅಳತೆ ಕೆಲಸ ಪೂರೈಸಿ ನೀಡಿರುವ ಹಿಂಬರಹವನ್ನು ಸ್ವತಃ ಪಾಂಚಾಯಿತಿಗೆ ಸಲ್ಲಿಸಿರುತ್ತಾರೆ. ಶ್ರೀ ಕೆಂಪರಾಜು ಮಾಜಿ ಅಧ್ಯಕ್ಷರು, ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಮಗ ತಮ್ಮ ಕಚೇರಿಗೆ ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ ಜಮೀನನ್ನು ಅಕ್ರಮವಾಗಿ ಪೋಡಿ ಮಾಡಿಸಿಕೊಂಡಿರುವ ಬಗ್ಗೆ ದೂರನ್ನು ನೀಡಿ ಈ ಸ್ವತ್ತಿನಲ್ಲಿ ಖಾತಾ ನೋಂದಣಿ ಮಾಡದಂತೆ ದಾನ ಪತ್ರದ ನಕಲನ್ನು ಲಗತ್ತಿಸಿ ತಕರಾರು ನೀಡಿರುತ್ತಾರೆ. ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ 5 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ 2 ಗುಂಟೆ ಜಾಗವನ್ನು ಪೋಡಿ ಮಾಡಿಸಿಕೊಂಡು ಖಾತ ಮಾಡಿಕೊಡುವಂತೆ ಕೋರಿರುವ ಬಗ್ಗೆ ದಿಃ07.12.2016ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಅರ್ಜಿಯನ್ನು ಪರಿಗಣಿಸಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪತ್ರದಲ್ಲಿ ಅಕ್ರಮವಾಗಿ ಪೋಡಿ ಮಾಡಿಕೊಂಡಿರುವುದನ್ನು ರದ್ದು ಪಡಿಸಿ, ಶಿಕ್ಷಣ ಇಲಾಖೆಗೆ ಸೇರಿದ ಎಲ್ಲಾ ಆಸ್ತಿಯ ಸರಿಯಾಗುವವರೆಗೆ ಖಾತಾ ವಗೆರಿ ಮಾಡಬಾರದು ಎಂದು ದೂರುದಾರರ ಈ ಸ್ವತ್ತಿನ ಖಾತೆ ನೋಂದಣಿಯನ್ನು ತಾತ್ಕಾಲಿತಕವಾಗಿ ತಡೆಹಿಡಿಯಲು ನಿರ್ಣಯಿಸಲಾಗಿರುತ್ತದೆ ಎಂದು ಹೇಳಿ ಈ ಬಗ್ಗೆ ಕೆಲವು ದಾಖಲೆಗಳನ್ನು ಹಾಜರು ಪಡಿಸಿರುತ್ತಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಮರುಉತ್ತರವನ್ನು ಕೇಳಲಾಗಿ ದೂರುದಾರರು ಎದುರುದಾರರ ಆಕ್ಷೇಪಣೆಯಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

5. ದೂರುದಾರರ ದೂರು, ದಾಖಲೆಗಳು, ಎದುರುದಾರರ ಆಕ್ಷೇಪಣೆ, ದಾಖಲೆಗಳನ್ನು ಹಾಗೂ ದೂರುದಾರರ ಪ್ರತ್ಯುತ್ತರ ಹಾಗೂ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ದೂರುದಾರರು ತಮ್ಮ ದೂರಿನಲ್ಲಿ ಮಂಡ್ಯ ಜಿಲ್ಲೆ, ಮಳವಳ್ಳಿ ತಾಲ್ಲೂಕು, ಮಾಗನೂರು ಗ್ರಾಮದ ಸರ್ವೆ ನಂ.198 /2 ವಿಸ್ತೀರ್ಣ 2 ಎಕರೆ 3 ಗುಂಟೆ ಸ್ವತ್ತು ತನ್ನ ಅಣ್ಣ ಎಂ.ಬಿ. ಜಗದೀಶ ಬಿನ್ ಲೇಟ್ ಎಂ.ಬಿ.ಬಸವರಾಜಪ್ಪರವರು ದಿಃ15.05.1993ರಂದು ಸದರಿ ಗ್ರಾಮದ ಎಂ.ಬಿ.ಮದೇವಪ್ಪ ಬಿನ್ ಲೇಟ್ ಎಂ.ಸಿ.ಬಸವಪ್ಪನವರಿಂದ ಕ್ರಯಕ್ಕೆ ಪಡೆದಿದ್ದು ತನ್ನ ಅಣ್ಣ ಸದರಿ ಜಮೀನನ್ನು ಅನ್ಯಕ್ರಾಂತ್ಯ ಮಾಡಿಸಿರುತ್ತಾರೆ. ತನ್ನ ಅಣ್ಣ ಮೃತ ಪಟ್ಟ ನಂತರ ಮರಣಶಾಸನ ಬರೆದು ದಿಃ29.03.2014ರಂದು ಮೃತ ಪಟ್ಟಿರುತ್ತಾರೆ. ಅದರಂತೆ ಸದರಿ ಸ್ವತ್ತು ತನ್ನ ಹೆಸರಿಗೆ ಖಾತೆಯಾಗಿ ಪಹಣಿ ಪತ್ರಿಕೆಯು ಸಹ ಬಂದಿರುತ್ತದೆ. ದಿನಾಂಕ 12.05.2015ರಂದು ಎದುರುದಾರರ ಕಚೇರಿಗೆ ಪೂರಕ ದಾಖಲೆಗಳನ್ನು ಸಲ್ಲಿಸಿ ಗಣಕೀಕೃತ ಖಾತೆಗೆ (ಇ ಖಾತೆಗೆ) ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದು ಆದರೆ ಎದುರುದಾರರು ಅರ್ಜಿ ಸಲ್ಲಿಸಿ ಒಂದು ವರ್ಷ 9 ತಿಂಗಳು ಕಳೆದರೂ ಸಹ ಯಾವುದೇ ಉತ್ತರ ನೀಡಿರುವುದಿಲ್ಲ. ಈ ಬಗ್ಗೆ ಎದುರುದಾರರನ್ನು ಕೇಳಲಾಗಿ ಯಾವುದೇ ಸರಿಯಾದ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಎದುರುದಾರರ ವಿರುದ್ಧ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಅದೇ ರೀತಿ ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರು ನೀಡಲಾದ ಅರ್ಜಿಗೆ ಸಂಬಂಧಪಟ್ಟಂತೆ ದಿಃ17.03.2016ಂದು ಸದರಿ ಸ್ವತ್ತನ್ನು ಅಳತೆ ಮಾಡಲು ಸಭೆಯ ನಿರ್ಣಯದಂತೆ ಹಣ ಪಾವತಿಸಲು ಕಚೇರಿಗೆ ಕಳುಹಿಸಿಕೊಟ್ಟಿದ್ದು ಈ ಬಗ್ಗೆ ಅಳತೆ ಕೆಲಸ ಪೂರೈಸಿ ನೀಡಿರುವ ಹಿಂಬರಹವನ್ನು ಸ್ವತಃ ಪಂಚಾಯಿತಿಗೆ ಸಲ್ಲಿಸಿರುತ್ತಾರೆ. ಶ್ರೀ ಕೆಂಪರಾಜು ಮಾಜಿ ಅಧ್ಯಕ್ಷರು, ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಮಗ ತಮ್ಮ ಕಚೇರಿಗೆ ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ ಜಮೀನನ್ನು ಅಕ್ರಮವಾಗಿ ಪೋಡಿ ಮಾಡಿಸಿಕೊಂಡಿರುವ ಬಗ್ಗೆ ದೂರನ್ನು ನೀಡಿ ಈ ಸ್ವತ್ತಿನಲ್ಲಿ ಖಾತಾ ನೋಂದಣಿ ಮಾಡದಂತೆ ದಾನ ಪತ್ರದ ನಕಲನ್ನು ಲಗತ್ತಿಸಿ ತಕರಾರು ನೀಡಿರುತ್ತಾರೆ. ಸರ್ಕಾರಿ ಶಾಲೆಗೆ ದಾನವಾಗಿ ನೀಡಿರುವ 5 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ 2 ಗುಂಟೆ ಜಾಗವನ್ನು ಪೋಡಿ ಮಾಡಿಸಿಕೊಂಡು ಖಾತ ಮಾಡಿಕೊಡುವಂತೆ ಕೋರಿರುವ ಬಗ್ಗೆ ದಿಃ07.12.2016ರಂದು ನಡೆದ ಸಾಮಾನ್ಯ ಸಭೆಯಲ್ಲಿ ಮಾಗನೂರು ಕಾಲೋನಿಯ ಗ್ರಾಮಸ್ಥರು ಮತ್ತು ನಿವೇಶನ ದಾನಿಗಳ ಅರ್ಜಿಯನ್ನು ಪರಿಗಣಿಸಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಪತ್ರದಲ್ಲಿ ಅಕ್ರಮವಾಗಿ ಪೋಡಿ ಮಾಡಿಕೊಂಡಿರುವುದನ್ನು ರದ್ದು ಪಡಿಸಿ, ಶಿಕ್ಷಣ ಇಲಾಖೆಗೆ ಸೇರಿದ ಎಲ್ಲಾ ಆಸ್ತಿಯ

ಸರಿಯಾಗುವವರೆಗೆ ಖಾತಾ ವಗೈರೆ ಮಾಡಬಾರದು ಎಂದು ದೂರುದಾರರ ಈ ಸ್ವತ್ತಿನ ಖಾತೆ ನೋಂದಣಿಯನ್ನು ತಾತ್ಕಾಲಿತಕವಾಗಿ ತಡೆಹಿಡಿಯಲು ನಿರ್ಣಯಿಸಲಾಗಿರುತ್ತದೆ ಎಂದು ಹೇಳಿದ್ದಾರೆ. ಈ ಅಂಶವನ್ನು ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ಸುಳ್ಳು ಎಂಬುದಾಗಿ ಅಲ್ಲಗಳೆದಿದ್ದಾರೆ.

6. ದೂರುದಾರರು ಮತ್ತು ಎದುರುದಾರರು ಹಾಜರು ಪಡಿಸಲಾದ ದಾಖಲೆಗಳನ್ನು ಪರಿಶೀಲಿಸಲಾಗಿ ಮಳವಳ್ಳಿ ತಾಲ್ಲೂಕು ಮಾಗನೂರು ಗ್ರಾಮದ ಸರ್ವೆ ನಂ.198/2ಬಿ, 84 ಗುಂಟೆ ಜಮೀನು ಮೂಲತಃ ದೂರುದಾರರ ಅಣ್ಣ ಎಂ.ಬಿ.ಜಗದೀಶ್‌ರವರು ದಿಃ15.05.1993ರಂದು ಎಂ.ಬಿ.ಮಹದೇವಪ್ಪ ಬಿನ್ ಲೇಟ್ ಎಂ.ಸಿ.ಬಸಪ್ಪನವರಿಂದ ಕ್ರಯಕ್ಕೆ ಪಡೆದಿರುವುದು ಕ್ರಯ ಪತ್ರವನ್ನು ಪರಿಶೀಲಿಸಲಾಗಿ ಕಂಡುಬಂದಿರುತ್ತದೆ. ಆನಂತರ ಸದರಿ ಜಮೀನನ್ನು ಅನ್ಯಕ್ರಾಂತ್ಯ ಮಾಡಿ ದೂರುದಾರರ ಹೆಸರಿಗೆ ಅವರ ಅಣ್ಣ ವಿಲ್‌ಮೂಲಕ ಬರೆದುಕೊಟ್ಟಿದ್ದು ಈ ಬಗ್ಗೆ ಕಂದಾಯ ಇಲಾಖೆಯ ದಾಖಲೆಗಳು ಸಹ ಬಂದಿರುತ್ತವೆ. ಆನಂತರ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಗಣಕೀಕೃತ ಖಾತಾ ಮಾಡಿಕೊಡುವಂತೆ ಕೋರಿ ಎದುರುದಾರರ ಕಚೇರಿಗೆ ದಿಃ12.05.2015ರಂದು ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಎದುರುದಾರರು ಈ ಬಗ್ಗೆ ಯಾವುದೇ ಕ್ರಮ ಕೈಗೊಳ್ಳದೇ ಸುಮಾರು 2 ವರ್ಷ ಕಾಲಹರಣ ಮಾಡಿರುವುದು ಕಂಡುಬಂದಿರುತ್ತದೆ. ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ದೂರುದಾರರು ಹಾಜರು ಪಡಿಸಲಾದ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ಸ್ವತ್ತು ದೂರುದಾರರ ಹಕ್ಕು ಮತ್ತು ಮಾಲಿಕತ್ವಕ್ಕೊಳಪಟ್ಟಿರುವುದು ದಾಖಲೆಗಳಿಂದ ಕಂಡುಬಂದಿರುತ್ತದೆ. ಎದುರುದಾರರ ತಮ್ಮ ಆಕ್ಷೇಪಣೆಯಲ್ಲಿ ಶ್ರೀ. ಕೆಂಪರಾಜು ಮಾಜಿ ಅಧ್ಯಕ್ಷರು ಸದರಿ ಜಮೀನಿನಲ್ಲಿ ದಾನವಾಗಿ 5 ಗುಂಟೆ ಜಮೀನಿನಲ್ಲಿ ಅಕ್ರಮವಾಗಿ 2 ಗುಂಟೆ ಜಾಗವನ್ನು ಪೋಡಿ ಮಾಡಿಸಿಕೊಂಡು ಖಾತೆ ನೋಂದಾಯಿಸಿಕೊಡುವಂತೆ ಕೋರಿರುವ ಬಗ್ಗೆ ದಿಃ07.02.2016ರಂದು ಸಾಮಾನ್ಯ ಸಭೆಯಲ್ಲಿ ತೀರ್ಮಾನಿಸಿ ದೂರುದಾರರ ಈ ಖಾತೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆ ಎಂದು ಹೇಳಿದ್ದಾರೆ ಆದರೆ ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ದೂರುದಾರರು ಹಾಜರು ಪಡಿಸಲಾದ ಎಲ್ಲಾ ದಾಖಲೆಗಳು ಅವರ ನಿಲುವಿಗೆ ಪೂರಕವಾಗಿರುವುದರಿಂದ ಎದುರುದಾರರು ಸದರಿ ಜಮೀನಿನ ಇ ಖಾತವನ್ನು ಮಾಡಿಕೊಡುವುದು ಅವರ ಕರ್ತವ್ಯವಾಗಿರುತ್ತದೆ. ಆದರೆ ಎದುರುದಾರರು ದೂರುದಾರರ ಅರ್ಜಿಗೆ ಯಾವುದೇ ಕ್ರಮ ಕೈಗೊಳ್ಳದೇ ಸುಮಾರು 2

ವರ್ಷಗಳ ಕಾಲ ವಿಳಂಬ ಮಾಡಿ ಈವರೆವಿಗೂ ಸಹ ಯಾವುದೇ ಇ ಖಾತ ಮಾಡಿಕೊಡದೇ ತೊಂದರೆ ನೀಡಿರುವುದು ಕಂಡುಬಂದಿರುತ್ತದೆ.

7. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ದೂರುದಾರರ ಸ್ವತ್ತಿಗೆ ಸಂಬಂಧಪಟ್ಟಂತೆ ಇ ಖಾತ ಮಾಡಿಕೊಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

8. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- .1/3/18

[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.